ರಾಜ್ಯದಲ್ಲಿ ಎಲ್ಲೆಲ್ಲಿ ಪಿ.ಟಿ.ಪಿ. ತರಬೇತಿ ಕೇಂದ್ರಗಳ ಸ್ಥಾಪನೆ ಬಗ್ಗೆ.

**51 (55) ಶ್ರೀ ಪಾಟೀಲ್ ಎ.ಎಸ್. ನಡಹಳ್ಳಿ (ದೇವರ ಹಿಪ್ಪರಗಿ)**
**ಶ್ರೀ ಬಿ.ಎನ್.ಬಚ್ಚೇಗೌಡ (ಮಾನ್ಯ ಕಾರ್ಮಿಕ ಸಚಿವರು.)**

ಅ) 2009–10ನೇ ಸಾಲಿನಲ್ಲಿ ರಾಜ್ಯದ ಯಾವ ಯಾವ ಸ್ಥಳಗಳಲ್ಲಿ ಹೊಸದಾಗಿ ಐ.ಟಿ.ಐ ತರಬೇತಿ ಕೇಂದ್ರಗಳನ್ನು ಸ್ಥಾಪಿಸಲು ಉದ್ದೇಶಿಸಲಾಗಿದೆ?

2009–10ನೇ ಸಾಲಿನಲ್ಲಿ ರಾಜ್ಯದಲ್ಲಿ ಹೊಸದಾಗಿ ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆಗಳನ್ನು ಸ್ಥಾಪಿಸುವ ಬಗ್ಗೆ ಅನುದಾನದ ಲಭ್ಯತೆಯನ್ನು ಆಧರಿಸಿ ಕ್ರಮ ತೆಗೆದುಕೊಳ್ಳಲಾಗುವುದು

ಆ) ದೇವರಹಿಪ್ಪರಗಿ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಸರ್ಕಾರಿ ಐ.ಟಿ.ಐ. ತರಬೇತಿ ಕೇಂದ್ರಗಳ ಸಂಖ್ಯೆ ಎಷ್ಟು?

ದೇವರಹಿಪ್ಪರಗಿ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಯಾವುದೇ ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆ ಕಾರ್ಯ ನಿರ್ವಹಿಸುತ್ತಿರುವುದಿಲ್ಲ.

ಇ) ಹಾಗಿಲ್ಲದಿದ್ದಲ್ಲಿ, ಪ್ರಸಕ್ತ ಸಾಲಿನಲ್ಲಿ ಅತ್ಯಂತ ಹಿಂದುಳಿದ ಕೇಂದ್ರವಾದ ದೇವರಹಿಪ್ಪರಗಿ ಕ್ಷೇತ್ರದಲ್ಲಿ ಐ.ಟಿ.ಐ. ತರಬೇತಿ ಕೇಂದ್ರ ಸ್ಥಾಪಿಸಲು ಕ್ರಮ ಕೈಗೊಳ್ಳಲಾಗುವುದೇ?

ಪ್ರಸಕ್ತ ಸಾಲಿನಲ್ಲಿ ಅತಿ ಹಿಂದುಳಿದ ಕೇಂದ್ರವಾದ ದೇವರಹಿಪ್ಪರಗಿ ಕ್ಷೇತ್ರದಲ್ಲಿ ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆಯನ್ನು ಸ್ಥಾಪಿಸುವ ಬಗ್ಗೆ ಅನುದಾನದ ಲಭ್ಯತೆಯನ್ನು ಪರಿಶೀಲಿಸಿ ಕ್ರಮ ತೆಗೆದುಕೊಳ್ಳಲಾಗುವುದು.

ಈ) ಹಾಗಿಲ್ಲದಿದ್ದಲ್ಲಿ, ಇದಕ್ಕೆ ಕಾರಣಗಳೇನು?

ಅನ್ವಯಿಸುವುದಿಲ್ಲ.

**ಶ್ರೀ ಎ.ಎಸ್. ಪಾಟೀಲ(ನಡಹಳ್ಳಿ):** ಮಾನ್ಯ ಸಚಿವರು ಉತ್ತರಿಸಿದ್ದಾರೆ. ಆದರೆ, ಅವರ ಉತ್ತರ ನಮಗೆ ಸಮಾಧಾನ ತಂದಿಲ್ಲ. ಎರಡನೆಯದಾಗಿ, ಅವರು ತಮ್ಮ ಉತ್ತರದಲ್ಲಿ ಅತ್ಯಂತ ಹಿಂದುಳಿದಿರುವ ದೇವರಹಿಪ್ಪರಗಿ ಮತಕ್ಷೇತ್ರದಲ್ಲಿ ITI college ಅನ್ನು ಪ್ರಾರಂಭ ಮಾಡುವುದಕ್ಕೆ ಅನುದಾನದ ಲಭ್ಯತೆ ಆಧರಿಸಿ ಕ್ರಮ ತೆಗೆದುಕೊಳ್ಳುತ್ತೇವೆಂದು ಹೇಳಿದ್ದಾರೆ. ಸನ್ಮಾನ್ಯ ಸಚಿವರೆ, ತಾವು ನಂಜುಂಡಪ್ಪ ವರದಿಯನ್ನು ಓದಿದ್ದೀರಿ ಎಂದು ಭಾವಿಸಿದ್ದೇನೆ. ಬಜೆಟ್‌ನಲ್ಲೂ ಕಳೆದ ಮೂರು ವರ್ಷಗಳಿಂದ ಬಹಳಷ್ಟು ನೋಡಿದ್ದೇವೆ, ನೋಡುತ್ತಿದ್ದೇವೆ. 2300,2500,3000 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದೇವೆಂದು ಹೇಳುತ್ತಾರೆ. ಉತ್ತರ ಕರ್ನಾಟಕ ಅದರಲ್ಲೂ ವಿಶೇಷವಾಗಿ ಮುಂಬೈ ಕರ್ನಾಟಕದ ಹಿಂದುಳಿದ ಪ್ರದೇಶವಾದ ದೇವರ ಹಿಪ್ಪರಗಿ ಮತ ಕ್ಷೇತ್ರ 159ನೇ ಸ್ಥಾನದಲ್ಲಿದೆ. ತಾವು ನಂಜುಂಡಪ್ಪ ವರದಿ ನೋಡಬೇಕು. 159ನೇ ಸ್ಥಾನದಲ್ಲಿರುವ ತಾಲ್ಲೂಕು ಕೇಂದ್ರಕ್ಕೆ, ಕ್ಷೇತ್ರ ಪುನರ್‌ವಿಂಗಡಣೆ ಆದಮೇಲೆ ದೇವರ ಹಿಪ್ಪರಗಿ ಮತಕ್ಷೇತ್ರ ಹೊಸ ಮತಕ್ಷೇತ್ರವಾಗಿದೆ. ಅಲ್ಲಿ ITI

college ಇಲ್ಲ. ಅದನ್ನು ಕೊಡಲು ತಮ್ಮಲ್ಲಿ ಮನವಿ ಮಾಡಿಕೊಂಡಾಗ ತಾವು ಅನುದಾನ ಲಭ್ಯತೆ ಆಧರಿಸಿ ಕೊಡುತ್ತೇವೆಂದು ಉತ್ತರ ಕೊಟ್ಟಿದ್ದೀರಿ. ಹಾಗಾದರೆ, ಅನುದಾನ ಇಲ್ಲವೇ? ಹಾಗಾದರೆ, ನಂಜುಂಡಪ್ಪ ವರದಿಯನ್ನು implement ಮಾಡುತ್ತೇವೆಂದು ಏಕೆ ಹೇಳುತ್ತೀರಿ? ಸರ್ಕಾರದಲ್ಲಿ ಹಣವಿಲ್ಲ ಕಾಲೇಜು ಮಂಜೂರು ಮಾಡುವುದಕ್ಕೆ ಆಗುವುದಿಲ್ಲವೆಂದು ಸ್ಪಷ್ಟವಾಗಿ ಹೇಳಿದರೆ ಒಳ್ಳೆಯದು ಅಥವಾ ಇದರಲ್ಲೂ ಏನಾದರೂ ತಾರತಮ್ಯವಿದೆಯೇ? ಕಾಂಗ್ರೆಸ್ ಪಕ್ಷದ ಸದಸ್ಯರಾಗಿ ನಾವಿದ್ದೇವೆ ಎಂದು ಈ ರೀತಿ ಉತ್ತರ ಕೊಡುತ್ತೀರಾ? ಯಾವುದು ಎನ್ನುವುದರ ಬಗ್ಗೆ ತಾವು ಸ್ಪಷ್ಟಪಡಿಸಬೇಕು. ತಾವು ಇಲ್ಲಿಗೆ ITI college ಮಂಜೂರು ಮಾಡಲೇಬೇಕೆಂಬ ಒತ್ತಾಯ ಮಾಡುತ್ತೇನೆ. ಏಕೆಂದರೆ, ಅತ್ಯಂತ ಹಿಂದುಳಿದ ಮತಕ್ಷೇತ್ರದಿಂದ ನಾವು ಬಂದಿದ್ದೇವೆ. ಈ ರೀತಿಯಾಗಿ ಸರ್ಕಾರ ಉತ್ತರ ಕೊಟ್ಟು ನುಣುಚಿಕೊಳ್ಳುವುದಕ್ಕೆ ಸಾಧ್ಯವಿಲ್ಲ. ದೇವರ ಹಿಪ್ಪರಗಿ ಮತಕ್ಷೇತ್ರದ ವ್ಯಾಪ್ತಿಯಲ್ಲಿ ಸರ್ಕಾರಿ ITI college ಅನ್ನು 2009–10 ರ ಸಾಲಿನಲ್ಲಿ ಮಂಜೂರು ಮಾಡಲೇಬೇಕೆಂದು ಒತ್ತಾಯಿಸುತ್ತೇನೆ, ಆ ಬಗ್ಗೆ ತಾವು ಸ್ಪಷ್ಟ ಉತ್ತರವನ್ನು ಈ ಸದನದಲ್ಲಿ ನೀಡಬೇಕೆಂದು ತಮ್ಮನ್ನು ನಾನು ಆಗ್ರಹಿಸುತ್ತೇನೆ.

**ಶ್ರೀ. ಬಿ.ಎನ್. ಬಚ್ಚೇಗೌಡ:** ಮಾನ್ಯ ಸದಸ್ಯರ ಕ್ಷೇತ್ರದಲ್ಲಿ ಈಗಾಗಲೇ ಎರಡು ಅನುದಾನಿತ ಮತ್ತು 6 ಖಾಸಗಿ ITI college ಗಳು ಕೆಲಸ ಮಾಡುತ್ತಿವೆ. ತಮ್ಮ ಮತ ಕ್ಷೇತ್ರದಲ್ಲಿ ಒಟ್ಟು 8 ITI college ಗಳು ಕೆಲಸ ಮಾಡುತ್ತಿವೆ ಅಲ್ಲಿ ಸರ್ಕಾರಿ ITI college ಇಲ್ಲ. ಈ ರಾಜ್ಯದಲ್ಲಿ ಒಟ್ಟು 1085 ITI college ಗಳಿದ್ದು ಸುಮಾರು 1 ಲಕ್ಷ ವಿದ್ಯಾರ್ಥಿಗಳು ಒಂದು ವರ್ಷಕ್ಕೆ ವಿದ್ಯಾಭ್ಯಾಸ ಮುಗಿಸಿ ಹೊರಗೆ ಬರುತ್ತಾರೆ. 2007–08ರಲ್ಲಿ ರಾಜ್ಯದಲ್ಲಿ ಒಟ್ಟು 37 ಸರ್ಕಾರಿ ITI college ಗಳಿಗೆ ಮಂಜೂರಾತಿ ಕೊಡಲಾಗಿದೆ. 2008–09ರಲ್ಲಿ 175 ತಾಲ್ಲೂಕುಗಳಲ್ಲಿ ಯಾವ ತಾಲ್ಲೂಕುಗಳಲ್ಲಿ ಇಲ್ಲ ಅಲ್ಲಿಗೆ 10 ಸರ್ಕಾರಿ ITI college ಗಳನ್ನು ಕೊಟ್ಟು, 175 ತಾಲ್ಲೂಕುಗಳಲ್ಲಿಯೂ ಒಂದೊಂದು ಸರ್ಕಾರಿ ITI college ಇರಬೇಕೆಂದು ಈ ರೀತಿ ಕೊಡುತ್ತಾ ಬರಲಾಗಿದೆ. ಆ ರೀತಿ ಎಲ್ಲಾ ಕಡೆ coverage ಮಾಡಬೇಕೆಂದಿದೆ. ತಾವು ಹೇಳಿದ ಹಾಗೆ, ಹಿಂದುಳಿದ ಪ್ರದೇಶಗಳಿಗೂ ಕೊಡಬೇಕೆಂದು ತೀರ್ಮಾನ ತೆಗೆದುಕೊಂಡು ಅದನ್ನು ಮುಂದಿನ ದಿನಗಳಲ್ಲಿ ನಮ್ಮ ಅನುದಾನ ಏನಿದೆ ಅದರ ಪ್ರಕಾರ, ಬಜೆಟ್‌ನಲ್ಲಿ ಕೊಡುವುದನ್ನು ನೋಡಿ ಹಿಂದುಳಿದ ಪ್ರದೇಶಗಳಿಗೆ ಕೊಡುವ ಬಗ್ಗೆ ಮುಖ್ಯಮಂತ್ರಿಗಳ ಹತ್ತಿರ ಮಾತನಾಡಿ ಆರ್ಥಿಕ ವ್ಯವಸ್ಥೆ ನೋಡಿ ಲಭ್ಯವಿರುವ ಹಣದಲ್ಲಿ ಕೊಡುತ್ತೇವೆಂದು ಹೇಳಿದ್ದೇನೆ. ನೀವು ಕೇಳಿರುವುದನ್ನು ನಿರಾಕರಿಸಿಲ್ಲ, ತಾವು ಆ ಬಗ್ಗೆ ನಿರಾಶರಾಗಬೇಕಾಗಿಲ್ಲ. ಮುಂದಿನ ದಿನಗಳಲ್ಲಿ ಆ ಪ್ರಯತ್ನ ಮಾಡಿ ನಮ್ಮ ಅನುದಾನ ಆಧರಿಸಿ ಲಭ್ಯ ಹಣಕಾಸಿನ ವ್ಯವಸ್ಥೆಯಲ್ಲಿ ಕೊಡುವ ಕಾರ್ಯ ಮಾಡುತ್ತೇವೆ.

**ಶ್ರೀ ಎ.ಎಸ್. ಪಾಟೀಲ(ನಡಹಳ್ಳಿ):** ನಮ್ಮ ಜಿಲ್ಲೆಯನ್ನು ತೆಗೆದುಕೊಂಡರೆ ಮೂರು ITI college ಗಳನ್ನು ಮಂಜೂರು ಮಾಡಿದ್ದೀರಿ. ಬಿಜಾಪುರದಲ್ಲಿ, ಬಬಲೇಶ್ವರದಲ್ಲಿ, ನಾಲತ್ವಾಡದಲ್ಲಿ ಒಂದೊಂದು ಸರ್ಕಾರಿ ITI college ಗಳಿವೆ. ನಮ್ಮ ಜಿಲ್ಲೆಯಲ್ಲಿ 5 ತಾಲ್ಲೂಕುಗಳಿವೆ. ನನ್ನ ಮತಕ್ಷೇತ್ರ ಸಿಂಧಗಿ ತಾಲ್ಲೂಕಿಗೆ ಬರುತ್ತದೆ. ಅದಕ್ಕೆ ನಾನು ತಮ್ಮಲ್ಲಿ ಮನವಿ ಮಾಡುತ್ತೇನೆ. ತಾವು ಖಾಸಗಿ ITI ಗಳಿವೆ Permission ಕೊಟ್ಟಿದ್ದೇವೆಂದು ಹೇಳಿದ್ದೀರಿ. ಇವತ್ತು ITI college ಗಳಲ್ಲಿ ಅತ್ಯಂತ ಬಡವರ ಮಕ್ಕಳು ಅತೀ ಹೆಚ್ಚು percentage ತೆಗೆದುಕೊಂಡಿರುವವರು ಓದುತ್ತಾರೆ. ಅವರು immediate ಆಗಿ ಕೆಲಸಕ್ಕೆ ಸೇರಬೇಕಾಗಿದೆ, ಅವರು ಅವರ ಕುಟುಂಬದ ಆಧಾರವಾಗಿ ನಿಲ್ಲಬೇಕಾಗಿರುವುದರಿಂದ ಅವರು ITI ಗೆ ಸೇರುತ್ತಾರೆ. ಆ ಬಡ ಮಕ್ಕಳು ಖಾಸಗಿ ITI college ಗೆ ಸೇರಲಿಕ್ಕೆ ಹೋದರೆ 20 ಸಾವಿರ ರೂಪಾಯಿಗಳನ್ನು donation ರೂಪದಲ್ಲಿ ಕೊಡಬೇಕಾಗುತ್ತದೆ. ಸನ್ಮಾನ್ಯ ಸಚಿವರಲ್ಲಿ ಮನವಿ ಮಾಡುವುದೇನೆಂದರೆ, ಏನಾದರೊಂದು ಸ್ಪಷ್ಟನೆ ಕೊಡಿ. 2009–10ರಲ್ಲಿನ ಮತಕ್ಷೇತ್ರವಾಗಲಿ, ಇನ್ನೊಂದು ಮತಕ್ಷೇತ್ರವಾಗಲಿ, ಒಟ್ಟಿನಲ್ಲಿ ಸಿಂಧಗಿ ತಾಲ್ಲೂಕಿಗೆ ಒಂದು ಸರ್ಕಾರಿ ITI college ಕೊಡುತ್ತೇವೆಂದು ಆಶ್ವಾಸನೆ ಕೊಡಿ. ಸಿಂಧಗಿ ಕ್ಷೇತ್ರದ ಶಾಸಕರು ಇಲ್ಲಿಯೇ ಇದ್ದಾರೆ. ಶಾಸಕರೇ, ತಾವೂ ಹೇಳಿ. ಅವರೂ ಕೂಡ ನಿಮ್ಮ ಪಕ್ಷದ ಶಾಸಕರೇ, ಸಿಂಧಗಿ ತಾಲ್ಲೂಕು ಬಹಳ ಹಿಂದುಳಿದಿದೆ. ಅವರಲ್ಲಿಯೂ ಕೂಡ ನಾನು ಮನವಿ ಮಾಡುತ್ತೇನೆ. ತಾವು ಸಿಂಧಗಿ ತಾಲ್ಲೂಕಿನ ಬಡ ಮಕ್ಕಳಿಗೆ ಅನುಕೂಲವಾಗುವ ಹಾಗೆ ಕನಷ್ಠ ಒಂದು ಸರ್ಕಾರಿ ITI college ಅನ್ನು ಮಂಜೂರು ಮಾಡಲೇಬೇಕೆಂದು ಆಗ್ರಹಿಸುತ್ತೇನೆ. ನೀವು ಮಂಜೂರು ಮಾಡುತ್ತೇವೆಂದು ಹೇಳಿದರೆ ಸಾಕು.

**ಶ್ರೀ ಬಿ.ಎನ್. ಬಚ್ಚೇಗೌಡ:** 2009–10ರಲ್ಲಿ ಶಾಸಕರು ಅವರವರ ಕ್ಷೇತ್ರಗಳಿಗೆ ಈ ರೀತಿ ITI college ಗಳು ಬೇಕೆಂದು ಬೇಡಿಕೆ ಸಲ್ಲಿಸಿದ್ದು, ಸುಮಾರು 85 ಅರ್ಜಿಗಳು ಬಂದಿದ್ದು ಅದೇ ರೀತಿ ಖಾಸಗಿಯವರೂ ಕೇಳಿದ್ದಾರೆ. ಇದರಲ್ಲಿ ಆದ್ಯತೆಯನ್ನು ಕೊಟ್ಟು ಎಲ್ಲೆಲ್ಲಿ ITI college ಇಲ್ಲ ಅಥವಾ ಎಲ್ಲಿ ಬೇಕು ಎಂಬುದನ್ನು ನೋಡಿ ನಾವು ಮತ್ತು ಇಲಾಖೆಯವರು ಆದ್ಯತೆ ಮೇಲೆ ಹಣಕಾಸಿನ ಚೌಕಟ್ಟಿನಲ್ಲಿ ಕೊಡುವುದಕ್ಕೆ ಮುಖ್ಯಮಂತ್ರಿಗಳು ಮತ್ತು ನಾವು ಚರ್ಚೆ ಮಾಡಿ ತೀರ್ಮಾನ ತೆಗೆದುಕೊಳ್ಳುತ್ತೇವೆ.

**ಸರ್ಕಾರಿ ಆಸ್ಪತ್ರೆಗಳಿಗೆ ಔಷಧಿ ವಿತರಿಸುವ ಬಗ್ಗೆ.**

**52 (274) ಶ್ರೀ ಗೋಪಾಲಕೃಷ್ಣ ಬೇಳೂರು (ಸಾಗರ)**

**ಶ್ರೀ ಬಿ. ಶ್ರೀರಾಮುಲು (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)**